ತಾರೀಖು 8ನೆ ಮಾರ್ಚ್ 1907.

ನಂ. ಜೆ: 2754—ಲೆಜಿಸ್-44—06—1.

ಇನ್ಸ್ಟ್ರಕ್ಷನ್ಸ್.

ಮೈಸೂರು ಸೀಮೆಯಲ್ಲಿ ಉಪಯೋಗದಲ್ಲಿರುವ ಸಿವಿಲ್ ಪ್ರೊಸೀಡ್ಯೂರ್ ಕೋಡಿನ್ನು ಇನ್ನೂ ತಿದ್ದುಪಾಟು ಮಾಡುವ ಈ ಕೆಳಗಿನ ಚಿತ್ತು ರೆಗ್ಯುಲೇಷನ್ನನ್ನು ಉದ್ದೇಶಗಳ ಮತ್ತು ಕಾರಣಗಳ ವಿವರಣೆಯೊಡನೆ ಸರ್ವ ಜನರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿದೆ.

2. ಈ ಚಿತ್ತು ರೆಗ್ಯುಲೇಷನ್ನನ್ನು ಅದು ಗೆಜೆಟ್ಟಿನಲ್ಲಿ ಪ್ರಕಟನೆಯಾದ ತಾರೀಖಿನಿಂದ ಮೂರು ತಿಂಗಳ ಕೊನೆಯಲ್ಲಿ ಆಲೋಚನೆಗೆ ತೆಗೆದುಕೊಳ್ಳಲಾಗುವುದು ಮತ್ತು ಆ ಕಾಲದೊಳಗೆ ಬರುವ ಎಲ್ಲಾ ಸೂಚನೆಗಳನ್ನೂ ಗುಣದೋಷ ನಿರೂಪಣೆಗಳನ್ನೂ ಕ್ರಮವಾಗಿ ಪರ್ಯಾಲೋಚಿಸಲಾಗುವುದು.

ಅಪ್ಪಣೆಯ ಪೇರ್ಗೆ,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಟರಿ.

ಸಿವಿಲ್ ಪ್ರೊಸೀಡ್ಯೂರ್ ಕೋಡಿನ್ನು ಇನ್ನೂ ತಿದ್ದುಪಾಟು ಮಾಡುವ ರೆಗ್ಯುಲೇಷನಿನ ಚಿತ್ತುಪ್ರತಿ (ಮುನ್ಸೂಚೆ).

ಮೈಸೂರು ಸೀಮೆಯಲ್ಲಿ ಉಪಯೋಗದಲ್ಲಿರುವ ಸಿವಿಲ್ ಪ್ರೊಸೀಡ್ಯೂರ್ ಕೋಡನ್ನು ಇನ್ನೂ ತಿದ್ದುಪಾಟುಮಾಡುವುದು ಯುಕ್ತವಾಗಿರುವುದರಿಂದ ಶ್ರೀಮನ್ ಮಹಾರಾಜರವರು ಈ ಕೆಳಗಿನಂತೆ ವಿಧಿಸಲು ಅಪ್ಪಣೆ ದಯಪಾಲಿಸಿರುತ್ತಾರೆ:

ಸಿವಿಲ್ ಪ್ರೊಸೀಡ್ಯೂರ್ ಕೋಡಿನ 310 A ಪ್ರಕರಣಕ್ಕೆ ಹೆಚ್ಚಾಗಿ ಸೇರಿಸೋಣ.

1. ಮೇಲ್ಕಂಡ ಕೋಡಿನ 310 A ಪ್ರಕರಣಕ್ಕೆ, (1)ನೆ ಮತ್ತು (2)ನೆ ಒಳ ಪ್ರಕರಣಗಳಿಗೆ ಮಧ್ಯೆ, ಈ ಕೆಳಗಿನ ಒಳ ಪ್ರಕರಣವನ್ನು ಸೇರಿಸತಕ್ಕದ್ದು, ಅದೇನೆಂದರೆ,

"(1. A.) ಹರಾಜು ತಾರೀಖಿನಿಂದ ಮೂವತ್ತು ದಿನಗಳೊಳಗಾಗಿ ಉಪಾಧೇವಣೆಯು ಇಡಲ್ಪಟ್ಟರೆ, ಹರಾಜನ್ನು ರದ್ದು ಮಾಡುವ ಬಂದು ಹುಕುಮನ್ನು ಕೋರ್ಟಿನವರು ಕೊಡತಕ್ಕದ್ದು."

584 (*d*) ಪ್ರಕರಣಕ್ಕೆ ಹೆಚ್ಚಾಗಿ ಸೇರಿಸೋಣ.

2. ಮೇಲ್ಕಂಡ ಕೋಡಿನ 584ನೆ ಪ್ರಕರಣದ (*d*) ವಾಕ್ಯದಲ್ಲಿ "ಯಾವ ಮೊಕದ್ದಮೆಗಳಲ್ಲಿ" ಎಂಬ ಮಾತುಗಳಿಗೆ ಮೊದಲು ಈ ಕೆಳಗಿನ ಮಾತುಗಳನ್ನು ಸೇರಿಸತಕ್ಕದ್ದು, ಎಂದರೆ

"ಯಾವ ಮೊಕದ್ದಮೆಗಳ ವಿವಾದಾಂಶದ ಮೊಬಲಗು ಅಥವಾ ಕಮ್ಮತ್ತು ಐನೂರು ರೂಪಾಯಿಗಳಾಗಿ ಅಥವಾ ಅದಕ್ಕೆ ಮೇಲ್ಪಟ್ಟು ಇದೆಯೋ ಮತ್ತು"

586ನೆ ಪ್ರಕರಣದ ತಿದ್ದುಪಾಟು.

3. 586ನೆ ಪ್ರಕರಣದಲ್ಲಿ "ಐವತ್ತು ರೂಪಾಯಿಗೆ" ಎಂಬ ಮಾತುಗಳಿಗೆ "ಐನೂರು ರೂಪಾಯಿಗೆ" ಎಂಬ ಮಾತುಗಳನ್ನು ಸೇರಿಸತಕ್ಕದ್ದು.

588ನೆ ಪ್ರಕರಣಕ್ಕೆ ಹೆಚ್ಚಾಗಿ ಸೇರಿಸೋಣ.

4. ಮೇಲ್ಕಂಡ ಕೋಡಿನ 588ನೆ ಪ್ರಕರಣಕ್ಕೆ, ಈ ಕೆಳಗಿನ ವಾಕ್ಯಾಂಗವನ್ನು ಸೇರಿಸತಕ್ಕದ್ದು ಎಂದರೆ,

"(16. A.) 310 A ಪ್ರಕರಣದ ಪ್ರಕಾರದ ಹುಕುಂಗಳು."

ಉದ್ದೇಶಗಳ ಮತ್ತು ಕಾರಣಗಳ ವಿವರಣೆ.

ಮೊದಲನೆಯದು, 1906ನೆ ಇಸವಿಯ 3ನೆ ರೆಗ್ಯುಲೇಷನಿನಿಂದ ತಿದ್ದುಪಾಟು ಮಾಡಲ್ಪಟ್ಟಿರುವ ಸಿವಿಲ್ ಪ್ರೊಸೀಡ್ಯೂರ್ ಕೋಡಿನಲ್ಲಿರುವ ಕೆಲವು ಕ್ರಮದ ಕೊರತೆಗಳನ್ನು ತಿದ್ದುವುದಕ್ಕೂ, ಮತ್ತು ಎರಡನೆಯದು, ಎರಡನೆ ಅಪೀಲಿನ ಹಕ್ಕನ್ನು ಸ್ವಲ್ಪಮಟ್ಟಿಗೆ ಕಡಮೆ ಮಾಡುವುದರಿಂದ ಚೀಫ್ ಕೋರ್ಟಿನಲ್ಲಿ ಕೆಲಸವು ಇನ್ನೂ ತ್ವರೆಯಾಗಿ ವ್ಯವಸ್ಥೆಯಾಗುವಂತೆ ಮಾಡುವುದಕ್ಕೂ ಈ ಚಿತ್ತು ರೆಗ್ಯುಲೇಷನು ಉದ್ದೇಶಿಸಲ್ಪಟ್ಟಿದೆ.

2. 1906ನೆ ಇಸವಿಯ 3ನೆ ರೆಗ್ಯುಲೇಷನಿನಿಂದ ಸೇರಿಸಲ್ಪಟ್ಟ 310 A. ಪ್ರಕರಣವು, ಸ್ಥಿರಸ್ವತ್ತಿನ ಒಡೆಯನಾದ ಅಥವಾ ಅದರಲ್ಲಿ ಕೆಲವು ತರದ ಸಂಬಂಧವುಳ್ಳ ಮನುಷ್ಯನು ಹರಾಜು ತಾರೀಖಿನಿಂದ ಮೂವತ್ತು ದಿನಗಳೊಳಗಾಗಿ ಕೆಲವು ಬೇವಣೆಗಳನ್ನು ಇಟ್ಟಾಗ ಅಂಥಾ ಸ್ವತ್ತಿನ ಹರಾಜನ್ನು ರದ್ದು ಮಾಡಿಸಲು ಅರ್ಜಿ ಮಾಡಬಹುದೆಂದು ನೇಮಿಸುತ್ತದೆ. ಮೇಲ್ಕಂಡಂತೆ ಅಂಥಾ ಬೇವಣೆಯು ಇಡಲ್ಪಟ್ಟಾಗ, ಕೋರ್ಟಿನವರು ಹರಾಜನ್ನು ರದ್ದು ಮಾಡುವ ಹುಕುಮನ್ನು ಕೊಡತಕ್ಕದ್ದೆಂಬ ಅಂಶವನ್ನು ಸ್ಪಷ್ಟೀಕರಿಸುವುದಕ್ಕೋಸ್ಕರ ಆ ಪ್ರಕರಣಕ್ಕೆ ಒಂದು ಒಳಪ್ರಕರಣವು ಸೇರಿಸಲ್ಪಟ್ಟಿದೆ. 310 A. ಪ್ರಕರಣದ ಪ್ರಕಾರದ ಹುಕುಂಗಳ ಮೇಲೆ ಅಪೀಲ್ಮಾಡುವುದಕ್ಕಾಗುವ ಹಾಗೆ 588ನೆ ಪ್ರಕರಣಕ್ಕೆ ಒಂದು ವಾಕ್ಯವನ್ನೂ ಕೂಡ ಸೇರಿಸಿ ಇದೆ. ಹಾಗೆ ಅಪೀಲ್ಮಾಡುವುದಕ್ಕಾಗುವ ಸಂಗತಿಯು 310 A. ಪ್ರಕರಣದ 4ನೆ ಒಳ ಪ್ರಕರಣದಿಂದ ಮೊದಲೆ ಗೂಢವಾಗಿ ಸೂಚಿಸಲ್ಪಟ್ಟಿದೆ.

3. 1888ರಲ್ಲಿ ಸಿವಿಲ್ ಪ್ರೊಸೀಡ್ಯೂರ್ ಕೋಡು ಮೈಸೂರಿಗೆ ಉಪಯೋಗಕ್ಕೆ ತರಲ್ಪಟ್ಟಾಗ, ವಸ್ತು ಸ್ಥಿತಿಗಳ ವಿಷಯದಲ್ಲಿ ಕೆಳಗಿನ ಎರಡು ಕೊಟ್ರ್ಮಗಳು ಭಿನ್ನಾಭಿಪ್ರಾಯಪಟ್ಟಾಗ ಅಂಥಾ ವಿಷಯಗಳಲ್ಲಿ ಆಗ ಹೊಸದಾಗಿ (ಮೂರು ಜಡ್ಜ್‌ಗಳಿಂದನೆ ವಿರ್ಪಡಿಸಲ್ಪಟ್ಟು) ಚೀಫ್ ಕೋರ್ಟಿಗೆ ಎರಡನೆ ಅಪೀಲ್ಮಾಡುವುದಕ್ಕಾಗುವ ಹಾಗೆ 584ನೆ ಪ್ರಕರಣಕ್ಕೆ (d) ವಾಕ್ಯವು ಹೆಚ್ಚಾಗಿ ಸೇರಿಸಲ್ಪಟ್ಟಿತು. (d) ವಾಕ್ಯವನ್ನು ಒಟ್ಟಿಗೆ ರದ್ದುಮಾಡಬಹುದು, ಅಥವಾ ವಸ್ತು ಸ್ಥಿತಿಗಳ ಮೇಲಿನ ಎರಡನೆ ಅಪೀಲುಗಳಿಗೆ ಸಂಬಂಧಪಟ್ಟ ನಿಯಮಗಳನ್ನು 500 ರೂಪಾಯಿ ಮತ್ತು ಅದಕ್ಕೆ ಮೇಲ್ಪಟ್ಟ ಬೆಲೆಯ ಅಪೀಲುಗಳಿಗೆ ಮಿತಪಡಿಸಬಹುದು, ಎಂದು ಚೀಫ್ ಕೋರ್ಟಿನವರು ಶಿಫಾರಸು ಮಾಡಿರುತ್ತಾರೆ. ಮೈಸೂರು ಸೀಮೆಯಲ್ಲಿ ಚೀಫ್ ಕೋರ್ಟಿನ ಡಿಕ್ರಿಗಳು ಅಬ್ಸೊಲ್ಯೂಟಾಗಿವೆ. ಮತ್ತು ಬ್ರಿಟಿಷ್ ಇಂಡಿಯಾವಿನಲ್ಲಿ ಇರುವಂತೆ ಅದಕ್ಕೆ ಮೇಲ್ಪಟ್ಟ ನ್ಯಾಯಸ್ಥಾನಕ್ಕೆ ಮುಂದೆ ಅಪೀಲು ಇಲ್ಲ ಎಂಬ ಸಂಗತಿಯನ್ನು ಆಲೋಚಿಸಿ ಮೇಲ್ಕಂಡ ಎರಡು ಅಂಕಗಳಲ್ಲಿ ಎರಡನೆಯದು ಒಳ್ಳೆಯದೆಂದು ಗವರ್ನ್‌ಮೆಂಟಿನವರು ಅಭಿಪ್ರಾಯಪಡುತ್ತಾರೆ. ಆದುದರಿಂದ 584ನೆ ಪ್ರಕರಣಕ್ಕೆ ಸಂಬಂಧವಾದ ತಿದ್ದುಪಾಟನ್ನು ಆಲೋಚಿಸಿ ಇದೆ.

4. 1884ನೆ ಇಸವಿಯ 2ನೆ ರಗ್ಯುಲೇಷನಿನಿಂದ ತಿದ್ದುಪಾಟು ಮಾಡಲ್ಪಟ್ಟ 586ನೆ ಪ್ರಕರಣವು 50 ರೂಪಾಯಿ ಪೈಲಿಗೆ ಮೀರುವ ಸ್ಮಾಲ್‌ಕಾಜ್ ಸ್ವಭಾವದ ಎಲ್ಲಾ ವೊಕದ್ದಮೆಗಳಲ್ಲಿಯೂ ಎರಡನೆ ಅಪೀಲಿಗೆ ಅವಕಾಶ ಕೊಡುತ್ತದೆ. ಬ್ರಿಟಿಷ್ ಇಂಡಿಯಾವಿನಲ್ಲಿ 500 ರೂಪಾಯಿನ ಅವಧಿ ಇದೆ; ಮತ್ತು ಮೈಸೂರು ಸೀಮೆಯಲ್ಲಿಯೂ ಹಾಗೆಯೇ ಅವಧಿಯನ್ನು ಯಾತಕ್ಕೆ ಹೆಚ್ಚಿಸಬಾರದು ಎಂಬುವುದಕ್ಕೆ ಯಾವ ಒಳ್ಳೆಯ ಕಾರಣವೂ ಇಲ್ಲವೆಂದು ತೋರುತ್ತದೆ. ಚಿಕ್ಕ ವೊಕದ್ದಮೆಗಳಲ್ಲಿ ಎರಡನೆಯ ಅಪೀಲುಗಳಿಂದ ವ್ಯವಹಾರ ಸಾಗುವುದಕ್ಕೆ ಬಹಳವಾಗಿ ಅಡಚಣೆಯಾಗಿದೆ ಎಂಬ ಕಾರಣದ ಮೇಲೆ ಚೀಫ್ ಕೋರ್ಟಿನವರು ಬದಲಾವಣೆಯಾಗಬೇಕೆಂದು ಪ್ರೇರೇಪಿಸುತ್ತಾರೆ. ತದನುಸಾರವಾಗಿ 586ನೆ ಪ್ರಕರಣವನ್ನು ತಿದ್ದುಪಾಟು ಮಾಡುವುದಾಗಿ ಆಲೋಚಿಸಿ ಇದೆ.